**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 534/2022

ಡಿ ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಹುಸೇನಬೇಗ್ ಸವಣೂರ |
| ತಂದೆ ಹೆಸರು | ಃ | ಖಾದರಬೇಗ್ |
| ವಯಸ್ಸು | ಃ | 57 ವರ್ಷ |
| ವೃತ್ತಿ | ಃ | ವ್ಯಾಪಾರ |
| ವಾಸ್ತವ್ಯ | ಃ | ಅಂಬೇಡ್ಕರ ಓಣಿ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 07-05-2025.

**<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎಂ ಎ ಎನ್., ವಕೀಲರಿಂದಃ</u>**

ನಾನು ಮತ್ತು ಶಂಭುಲಿಂಗಯ್ಯ ರವರು ಶಾಲಾ ಕಾಲೇಜಿನಿಂದ ಸ್ನೇಹಿತರು. ನಾನು ಅವರು ತೆಗೆದುಕೊಂಡ ಸಾಲಕ್ಕೆ ಜಾಮೀನುದಾರನಾಗಿದ್ದು, ನಾನು ತೆಗೆದುಕೊಂಡ ಸಾಲಕ್ಕೆ ಅವರು ಜಾಮೀನುದಾರರಾಗಿದ್ದರು. ನಾನು ಸೇಂಟ್ ಮಿಲಾಗ್ರಿಸ ಸೊಸೈಟಿಯಲ್ಲಿ ಸಾಲವನ್ನು ಪಡೆದುಕೊಂಡಿದ್ದೆ. ಶಂಭುಲಿಂಗಯ್ಯರವರು ದೈವಜ್ಞ ಕೋ-ಆ ಸೊಸೈಟಿಯಲ್ಲಿ ಸಾಲ ಕೊಡುವಂತೆ ಅರ್ಜಿಯನ್ನು ಸಲ್ಲಿಸಿದ್ದರು, 15 ಲಕ್ಷ ರೂಪಾಯಿ ಸಾಲ ಮಂಜೂರಿ ಸಹ ಆಗಿತ್ತು. ಸದರಿ ಸಾಲಕ್ಕೆ ಇಬ್ಬರು ಜಾಮೀನುದಾರರು ಇದ್ದೆವು. ನಾನು ಮತ್ತು ಅವರ ಅಳಿಯ ರಾಚಯ್ಯ ಮಿತ್ರಿಕೋಟಿ ಎನ್ನುವವರು ಜಾಮೀನುದಾರರಾಗಿದ್ದೆವು. ಸದರಿ ಸಾಲಕ್ಕೆ ಅವರ ಅಳಿಯ ರಾಚಯ್ಯರವರು ತಮ್ಮ ಜಮೀನನ್ನು ಭದ್ರತೆ ಸಲುವಾಗಿ ನೀಡಿದ್ದರು. ನಾನು ಜಾಮೀನಾದರಾಗಿದ್ದರಿಂದ ನನಗೆ ಸೊಸೈಟಿಯಲ್ಲಿ 3 ಚೆಕ್ಕುಗಳನ್ನು ಕೇಳಿದರು. ಸದರಿ 3 ಚೆಕ್ಕುಗಳಿಗೆ ಸಹಿ ಮಾತ್ರ ಮಾಡಿ, ಅವುಗಳನ್ನು ಶಂಭುಲಿಂಗಯ್ಯರವರಿಗೆ ಕೊಟ್ಟೆನು. ಶಂಭುಲಿಂಗಯ್ಯ ರವರು ಕೇಳಿದ ಸಾಲ ಮಂಜೂರಿ ಆಗುವ ಹಂತದಲ್ಲಿ ಇತ್ತು, ಆದರೆ ಸೊಸೈಟಿಯವರು ಅವರು ಕೇಳಿದ ಸಾಲದ ಮೊತ್ತ ಹೆಚ್ಚಿಗೆ ಇದ್ದಿದ್ದರಿಂದ ಮಂಜೂರಿ ಮಾಡಿರುವುದಿಲ್ಲ. ಸಾಲದ ಅರ್ಜಿಯು ತಿರಸ್ಕಾರಗೊಂಡ ನಂತರ ನನಗೆ ಸಂಬಂಧಿಸಿದ ಚೆಕ್ಕುಗಳನ್ನು ಸೊಸೈಟಿಯವರು ಶಂಭುಲಿಂಗಯ್ಯರವರಿಗೆ ಕೊಟ್ಟಿರುತ್ತಾರೆ. ರಾಚಯ್ಯ ಮಿತ್ರಿಕೋಟಿರವರು ಬೋಜಾವನ್ನು ಕ್ಯಾನ್ಸಲ್ ಮಾಡಿಕೊಂಡರು. ಸಾಲಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸೊಸೈಟಿಯವರು ಶಂಭುಲಿಂಗಯ್ಯರವರಿಗೆ ಕೊಟ್ಟರು. ಶಂಭುಲಿಂಗಯ್ಯರವರಿಗೆ ಹುಷಾರಿಲ್ಲದ ಕಾರಣ ಅವರು ನನ್ನನ್ನು ಭೇಟಿಯಾಗಲು ಆಗಿರುವುದಿಲ್ಲ. ಸದರಿ ಸಮಯಕ್ಕೆ ನಾನು ಹುಬ್ಬಳ್ಳಿಯಿಂದ ಓಡಾಡುತ್ತಿದ್ದೆ. ಚೆಕ್ಕಿನ ಬಗ್ಗೆ ನಾನು ಅವರನ್ನು ಕೇಳಿದಾಗ ಸದರಿ ಚೆಕ್ಕುಗಳು ಅವರ ಎಲ್ ಎಸ್ ಎಂ ಪಿ ಸೊಸೈಟಿ ಕಚೇರಿಯ ಡ್ರಾನಲ್ಲಿ ಇವೆ ಕೊಡುತ್ತೇನೆ ಎಂದು ಹೇಳಿದ್ದರು. ಅನಾರೋಗ್ಯವಾದ ಕಾರಣ ಶಂಭುಲಿಂಗಯ್ಯರವರು

ಕಚೇರಿಗೆ ಬಂದಿರುವುದೇ ಇಲ್ಲ, ನಂತರ ದಿನಾಂಕಃ 28-05-2022 ರಂದು ಅವರು ತೀರಿಕೊಂಡಿರುತ್ತಾರೆ. ನಂತರ ದಿಃ 30-06-2022 ರಂದು ಸೊಸೈಟಿಯವರು ಪಂಚನಾಮೆಯನ್ನು ಜರುಗಿಸಿ ಡ್ರಾನಲ್ಲಿ ಇದ್ದ ವಸ್ತುಗಳನ್ನು ಅವರ ಹೆಂಡತಿಗೆ ಹಸ್ತಾಂತರಿಸಿರುತ್ತಾರೆ. ಸದರಿ ಡ್ರಾನಲ್ಲಿ ನಾನು ಭದ್ರತೆಗಾಗಿ ನೀಡಿದ ಚೆಕ್ಕುಗಳು ಮತ್ತು ದಾಖಲೆಗಳು ಇದ್ದವು. ಈ ಪ್ರಕರಣದಲ್ಲಿ ಹಾಜರುಪಡಿಸಿದ ಚೆಕ್ ಅವರ ಡ್ರಾನಲ್ಲಿ ಇತ್ತು. ಅವರ ಮಕ್ಕಳೊಂದಿಗೆ ನನ್ನದು ಯಾವುದೇ ವ್ಯವಹಾರ ಇರಲಿಲ್ಲ. ನಾನು ಸೈಟ್ ಕೊಡಿಸುತ್ತೇನೆ ಎಂದು ಫಿರ್ಯಾದಿಗೆ ಯಾವುದೇ ಆಶ್ವಾಸನೆ ನೀಡಿರುವುದಿಲ್ಲ ಮತ್ತು ಫಿರ್ಯಾದಿಯೊಂದಿಗೆ ಯಾವುದೇ ಕರಾರನ್ನು ಸಹ ಮಾಡಿಕೊಂಡಿರುವುದಿಲ್ಲ. ಡ್ರಾನಲ್ಲಿ ಸಿಕ್ಕ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಫಿರ್ಯಾದಿ ನನಗೆ ಬ್ಲಾಕಮೇಲ್ ಮಾಡಲು ಶುರು ಮಾಡಿದರು. ಕೋರ್ಟಿಗೆ ಹಾಕುತ್ತೇನೆ ಎಂದು ಹೇಳಿದ್ದರು. ಫಿರ್ಯಾದಿಯೊಂದಿಗೆ ನನ್ನದು ಯಾವುದೇ ವ್ಯವಹಾರ ಇರುವುದಿಲ್ಲ. ಅವರ ತಂದೆಯವರೊಂದಿಗೆ ಮಾತ್ರ ನನ್ನ ವ್ಯವಹಾರ ಇತ್ತು.

2. ಪ್ರಸ್ತುತ ಪ್ರಕರಣ ಸುಳ್ಳಿನಿಂದ ಕೂಡಿರುತ್ತದೆ. ನಾನು ಫಿರ್ಯಾದಿಗೆ ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ. ಫಿರ್ಯಾದಿ ಹೇಳುವ ದಿನದಂದು ನಾನು ಆಕೆಗೆ ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ. ಪ್ರಸ್ತುತ ಫಿರ್ಯಾದುವಿಗೆ ಮತ್ತು ನನಗೆ ಯಾವುದೇ ಸಂಬಂಧ ಇರುವುದಿಲ್ಲ.

**ಮುಂದುವರೆದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**